# ಆಹಾ ಸುದ್ದಿ!

★ ಸಸಿತೋಟ

ಜಪಾನಿನಲ್ಲಿ ರೈಲಿನಲ್ಲಿ ಬೆಕ್ಕುಗಳ ಕೆಫೆ ಶುರುವಾಗಿದೆ. ಸಂಗಾತಿಯಿಲ್ಲದೇ ಪ್ರಯಾಣ ಮಾಡುವವರು ಒಂಟಿತನ ನಿವಾರಿಸಿಕೊಳ್ಳಲು ಈ ಮಾರ್ಜಾಲಗಳನ್ನು ಮುದ್ದುಗರೆದು ಸಮಯ ಕಳೆಯಬಹುದಂತೆ. ಟಿಕೆಟ್ ಹಣದ ಜೊತೆಗೆ ಸಂಗಾತಿಯ ಖರ್ಚು ಭರಿಸುವ ಬದಲು ಈ ಮಿಯಾಂವ ಇತರೆ ಇತರೆ ಖರ್ಚುಗಳನ್ನು ಭರಿಸಲು ಸಿದ್ಧರಿರಬೇಕಷ್ಟೆ.



ದೆಹಲಿಯ ಚಿರಾಗ್ ಧವನ್ ಆನ್‌ಲೈನಿನಲ್ಲಿ ಬೇಡಿಕೆ ಸಲ್ಲಿಸಿದ್ದು ಬ್ರ್ಯಾಂಡ್ ನ್ಯೂ ಸ್ಮಾರ್ಟ್‌ಫೋನಿಗೆ. ಆದರೆ ಕೈಗೆ ಸಿಕ್ಕಿದ್ದು ಮಾತ್ರ ಬಟ್ಟೆಯನ್ನು ಥಳಥಳಿಸುವ ಮೂರು ಡಿಟರ್ಜೆಂಟ್ ಬಾರ್ ಸೋಪ್. ಮಾಧ್ಯಮದಲ್ಲಿ ಈ ವಿಷಯ ಪ್ರಸಾರವಾಗುತ್ತಿದ್ದಂತೆ ಎಚ್ಚೆತ್ತುಕೊಂಡ ಆನ್‌ಲೈನ್ ಮಾರಾಟ ಕಂಪೆನಿ ಸ್ಮಾರ್ಟ್‌ಫೋನ್ ಕೈಗಿತ್ತು, ಸೋಪನ್ನೂ ನೀವೇ ಇಟ್ಟುಕೊಳ್ಳಿ ಎಂದು ನಿಟ್ಟುಸಿರು ಬಿಟ್ಟಿತಂತೆ. ಉಚಿತ ಸೋಪ್ ಬೇಕಾದವರು ಸ್ಮಾರ್ಟ್‌ಫೋನ್‌ಗೆ ಆರ್ಡರ್ ಮಾಡಬಹುದು.

ಜಪಾನ್ ಏನೇನೆಲ್ಲಾ ತಯಾರು ಮಾಡುತ್ತಿದೆ ಗೊತ್ತಾ? ನೀವು ಟಾಯ್ಲೆಟ್ ಸೀಟ್ ಮೇಲೆ ಕುಳಿತು ಒತ್ತಡವನ್ನು ಖಾಲಿ ಮಾಡಿಕೊಂಡರೆ ಸಾಕಂತೆ, ಸೀಟೇ ನಿಮ್ಮನ್ನು ಶುಚಿ ಮಾಡಿ ಕಳಿಸುತ್ತದೆ; ಒಣಗಿಸುತ್ತದೆ. ಸದ್ಯ ಹೊಟ್ಟೆಯೊಳಗಿನ ಒತ್ತಡ ಹೊರ ಹಾಕಲೂ ಒತ್ತಡರಹಿತ ಆಲಸ್ಯ ತೋರುವವರಿಗೆ ಏನು ಕಂಡು ಹಿಡಿಯುತ್ತಾರೋ!





ನೃತ್ಯದ ಬಗ್ಗೆ ಹುಚ್ಚೆನಿಸುವಷ್ಟು ಆಸಕ್ತಿಯೇ? ಜರ್ಮನಿಯಲ್ಲಿ ‘ಮ್ಯಾಡ್ ಅಬೌಟ್ ಡಾನ್ಸ್’ ಎಂಬ ಉತ್ಸವ ನಡೆಯುತ್ತದೆ. ಎಲ್ಲೆಂದರಲ್ಲಿ ತುರ್ತಾಗಿ ನರ್ತಿಸಿ ತೃಪ್ತಿಪಡಬಹುದಂತೆ. ಖಾಲಿ ಹೊಡೆಯುವ ಮಾರಾಟ ಮಳಿಗೆಗಳಿಗೆ ಜನರನ್ನು ಸೆಳೆಯಲು ಯಾರೋ ತಲೆ ಖರ್ಚು ಮಾಡಿರಬಹುದು.

ಚೀನಾದಲ್ಲಿ ಕಳೆದ ತಿಂಗಳಷ್ಟೇ ವ್ಯಾಲೆಂಟೈನ್ ದಿನಾಚರಣೆ ನಡೆಯಿತು. ಅಂದು ಯುವತಿಯೊಬ್ಬಳು ತನ್ನ ಗಂಡನಿಂದ ಶಹಭಾಸ್‌ಗಿರಿ ಪಡೆಯಲು ಕೆಂಪು ಹುರುಳಿಕಾಯಿ ಸೂಪ್ ಮಾಡಿ ಡೆಲಿವರಿ ಸೇವಾ ಸಂಸ್ಥೆಯ ಮೂಲಕ ಗಂಡನ ಕಚೇರಿಗೆ ಕಳಿಸಿದಳಂತೆ. ಆದರೆ ಸೂಪ್ ಬಾಕ್ಸ್ ತೆರೆದ ಗಂಡನಿಗೆ ಕೆಟ್ಟ ವಾಸನೆ ಬಂದು ಹೆಂಡತಿಗೆ ವಾಚಾಮಗೋಚರ ಬೈಗಳದ ಉಡುಗೊರೆ ನೀಡಿದನಂತೆ. ನೊಂದ ಆಕೆ ಸೇವಾ ಸಂಸ್ಥೆಯನ್ನು ವಿಚಾರಿಸಿದರೆ ವಾಸನೆಯ ಮೂಲ ಹೊರಬಿತ್ತು. ಸೂಪ್ ತಲುಪಿಸಬೇಕಾದ ಸಿಬ್ಬಂದಿಗೆ ಬಾಯಾರಿಕೆಯಾಗಿ ಅದನ್ನೇ ಕುಡಿದನಂತೆ. ಮತ್ತೆ ಬಾಕ್ಸ್ ಭರ್ತಿ ಮಾಡಲು ಸ್ವಮೂತ್ರವನ್ನೇ ತುಂಬಿಸಿದ್ದನಂತೆ ಭೂಪ. ದ್ರವ ಪದಾರ್ಥಕ್ಕೆ ದ್ರವವನ್ನೇ ವಿನಿಮಯ ಮಾಡಿದ್ದ!



ಅಮೆರಿಕದ ಮಿಶಿಗನ್ನಿನ ಈ ವ್ಯಕ್ತಿ ಮನೆಯ ಬಾರ್ ಕೌಂಟರ್‌ವರೆಗೂ ತೆರಳಲಾರದಷ್ಟು ಸೋಮಾರಿ. ತನ್ನ ಕುರ್ಚಿಯಿಂದಲೇ ಬಿಯರ್ ಹನಿಸುವ ಬಿಯರ್ ಕುರ್ಚಿ ಕಂಡು ಹಿಡಿದಿದ್ದಾನಂತೆ. ಬಿಯರ್ ಕುಡಿದು ಕುಡಿದು ತುಂಬಿದ ಬ್ಲ್ಯಾಡರ್ ಖಾಲಿ ಮಾಡಲು ಇನ್ಯಾವ ಜಾದೂ ಕಂಡು ಹಿಡಿಯುತ್ತಾನೋ ಈ ಸೋಮಾರಿ.